ದಿಃ26.10.2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರ ನಂ 2 ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಪಾಟೀ ಸವಾಲುಃ

10. ನನ್ನ ಮಾವನ ಹೆಸರು ಬೀರಪ್ಪ. ಆತನ ತಂದೆಯ ಹೆಸರು ಕನ್ನವರ ಸಿದ್ದಪ್ಪ. ನನ್ನ ಮಾವನಾದ ಬೀರಪ್ಪ ಇತನ ತಮ್ಮನ ಹೆಸರು ನಾಗಪ್ಪ. ಬೀರಪ್ಪ ಇವರಿಗೆ ನನ್ನ ಗಂಡನಾದ ಕೆ.ಹನುಮಂತಪ್ಪ, ಕೆ.ಕೆಂಚಪ್ಪ ಮತ್ತು ಕೆ.ಬಸವರಾಜಪ್ಪ ಎಂಬ ಹೆಸರಿನ ಮೂರು ಜನ ಗಂಡು ಮಕ್ಕಳು ಅಂದರೆ ಸರಿ. ನನ್ನ ಮಾವನಾದ ಬೀರಪ್ಪ ಮತ್ತು ಆತನ ತಮ್ಮನಾದ ನಾಗಪ್ಪ ಪಾಲು ವಿಭಾಗ ಮಾಡಿಕೊಂಡಿದ್ದರು ಅಂದರೆ ಸರಿ.

11. ಜಮೀನು ಸರ್ವೆ ನಂ 32 ಇದು ಮೂಲತಃ 10 ಎಕರೆ 7 ಗುಂಟೆ ಜಮೀನು ಅನ್ನುವುದು ನನಗೆ ಗೊತ್ತಿಲ್ಲ. ಈ ಜಮೀನಿನಲ್ಲಿ ಪಾಲು ಆಗುವುದಕ್ಕಿಂತ ಮುಂಚೆ 1 ಎಕರೆ 38 ಗುಂಟೆ ಕಿರ್ಲೋಸ್ಕರ ಶಿಕ್ಷಣ ಟ್ರಸ್ಟ್‌ಗೊಸ್ಕರ ಭೂ-ಸ್ವಾದೀನ ಗೊಂಡಿರುತ್ತದೆ ಅಂದರೆ ಸರಿ. ಈ ಒಂದು ಎಕರೆ 38 ಗುಂಟೆ ಜಮೀನು ಹರಿಹರ-ಹರಪನಹಳ್ಳಿ ರಸ್ತೆಯ ಪೂರ್ವ ಭಾಗದಲ್ಲಿದೆ ಅಂದರೆ ಸರಿ. ಈ ಜಮೀನಿನ ಪೂರ್ವ ಭಾಗದಲ್ಲಿರುವ ಜಮೀನನ್ನು ನನ್ನ ಮಾವನಾದ ಬೀರಪ್ಪ ಹಾಗೂ ಆತನ ಸಹೋದರ ನಾಗಪ್ಪ ವಿಭಾಗ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಆ ಉಳಿದ ಜಮೀನನ್ನು ಅವರಿಬ್ಬರು ಪೂರ್ವ ಪಶ್ಚಿಮವಾಗಿ ಭಾಗ ಮಾಡಿಕೊಂಡಿದ್ದು ದಕ್ಷಿಣ ಭಾಗ ನಾಗಪ್ಪ ಇತನಿಗೆ ಮತ್ತು ಉತ್ತರದ ಭಾಗ ನನ್ನ ಮಾವ ಬೀರಪ್ಪ ಇತನಿಗೆ ಬಂದಿರುತ್ತದೆ ಅಂದರೆ ಸರಿ. ಅವರಿಬ್ಬರ ನಡುವೆ ಆದ ಪಾಲು ವಿಭಾಗ ಪತ್ರದಲ್ಲಿ ಮೇಲೆ ಹೇಳಿರುವ ಒಂದು ಎಕರೆ 38 ಗುಂಟೆ ಜಮೀನನ್ನು ತೋರಿಸಿಲ್ಲ ಅಂದರೆ ಸುಳ್ಳು. ಪಾಲು ವಿಭಾಗ ಪತ್ರವನ್ನು ನಿಪಿ-14 ಎಂದು ಗುರ್ತಿಸಲಾಗಿದೆ. ಅದರ ಪ್ರಕಾರ ಮೇಲ್ಕಂಡ ಸರ್ವೆ ನಂಬರಿನಲ್ಲಿ 5 ಎಕರೆ 3.5 ಗುಂಠೆ ಬೀರಪ್ಪ ಅಂದರೆ ನನ್ನ ಮಾವನಿಗೆ ಮತ್ತು ಉಳಿದ 5 ಎಕರೆ 3.5 ಗುಂಠೆ ಜಮೀನು ನಾಗಪ್ಪ ಇತನ ಪಾಲಿಗೆ ಅಂದಿರುತ್ತದೆ ಅನ್ನುವುದು ಸರಿ. ಪಾಲು ವಿಭಾಗ ಪತ್ರದ ಪ್ರಕಾರ ಸರ್ವೆ ನಂ 32 ಇದು ಮೂಲತಃ 10 ಎಕರೆ 7 ಗುಂಟೆ ಇರುವ ಬಗ್ಗೆ ನನಗೆ ಗೊತ್ತಿಲ್ಲ.

12. ನಾನು ಸರ್ವೆ ನಂ 32 ಇದಕ್ಕೆ ಸಂಬಂಧಪಟ್ಟಂತೆ 4 ಎಕರೆ 5 ಗುಂಠೆಗೆ ಮಾತ್ರ ದಾವೆ ಹಾಕಿರುತ್ತೇನೆ ಅಂದರೆ ಸರಿ. ಈ ಸ್ವತ್ತು ನನ್ನ ಮಾವನಾದ ಬೀರಪ್ಪ ಇತನ ಹಿರಿಯರು ಮಾಡಿದ ಸ್ವತ್ತಾಗಿರುತ್ತದೆ. ಈ 4 ಎಕರೆ 5 ಗುಂಠೆ ಜಮೀನಿನ ಪೂರ್ವಕ್ಕೆ ಹರಪನಹಳ್ಳಿ-ದಾವಣಗೆರೆ ಹಳೇ ರಸ್ತೆ, ಪಶ್ಚಿಮಕ್ಕೆ ಹರಿಹರ-ಹರಪನಹಳ್ಳಿ ರಸ್ತೆ, ದಕ್ಷಿಣಕ್ಕೆ ನಾಗಪ್ಪ ಇತನ ಜಮೀನು, ಉತ್ತರಕ್ಕೆ ಕರೇಗೋವಿಂದಪ್ಪರ ಬೀರಪ್ಪ ಇವರ ಜಮೀನು. ನನ್ನ ಮಾವನ ಪಾಲಿಗೆ 5 ಎಕರೆ 3.5 ಗುಂಠೆ ಜಮೀನು ಬಂದಿತ್ತು. ನಾನು 4 ಎಕರೆ 5 ಗುಂಠೆ ಜಮೀನಿಗೆ ದಾವೆ ಸಲ್ಲಿಸಿರುತ್ತೇನೆ. ಉಳಿದ ಜಮೀನು ಅಂದಾಜು 1 ಎಕರೆ ಚಿಲ್ಲರೆ ಗುಂಠೆ ಏನಾಯಿತು ಎಂಬುದು ಗೊತ್ತಿಲ್ಲ. 4 ಎಕರೆ 5 ಗುಂಠೆ ಜಮೀನಿಗೆ ನನ್ನ ಮಾವನ ಹೆಸರಿನಲ್ಲಿ ಪಹಣಿ ಇತ್ತು ಎಂಬುದಕ್ಕಾಗಿ ಅಷ್ಟು ಕ್ಷೇತ್ರಕ್ಕೆ ಮಾತ್ರ ದಾವೆ ಸಲ್ಲಿಸಿರುತ್ತೇನೆ.

13. ಕಿರ್ಲೋಸ್ಕರ ಶಾಲಾ ಶಿಕ್ಷಣ ಸಂಸ್ಥೆಯ ಟ್ರಸ್ಟ್ ಈ ಜಮೀನು 4 ಎಕರೆ 5 ಗುಂಟೆ ಈ ಜಮೀನಿನ ಯಾವ ದಿಕ್ಕಿನಲ್ಲಿ ಬರುತ್ತದೆ ಎಂಬುದು ತೋರಿಸಿಲ್ಲ. 4 ಎಕರೆ 5 ಗುಂಟೆ ಈ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಇರುವ ಜಮೀನು ಕಿರ್ಲೋಸ್ಕರ ಶಾಲಾ ಶಿಕ್ಷಣ ಸಂಸ್ಥೆಯ ಟ್ರಸ್ಟಿಗೆ ಸಂಬಂಧಪಟ್ಟ ಜಮೀನು ಅಂದರೆ ಸರಿ. ಭೂ ಸ್ವಾದೀನಗೊಂಡ ಜಮೀನಿನ ಕುರಿತು ನನ್ನ ಮಾವ ಮತ್ತು ಆತನ ಸಹೋದರ ನಾಗಪ್ಪ ನಿಪಿ-14 ಪಾಲು ವಿಭಾಗ ಪತ್ರದಲ್ಲಿ ಮುಚ್ಚಿಟ್ಟಿರುತ್ತಾರೆ ಅಂದರೆ ಸುಳ್ಳು.

14. ದಿಃ10.10.1980 ರಲ್ಲಿ ನನ್ನ ಗಂಡ ತೀರಿಕೊಂಡಿರುತ್ತಾನೆ. ಈ ದಿನಾಂಕವನ್ನು ನನ್ನ ವಾದ ಪತ್ರದಲ್ಲಿ, ಎಫ್.ಡಿ.ಪಿ ಅರ್ಜಿಯಲ್ಲಿ ಮತ್ತು ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುತ್ತೇನೆ. ಈ ದಿನಾಂಕವನ್ನು ನಾನು ಉಲ್ಲೇಖಿಸದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಾವನಾದ ಬೀರಪ್ಪ ಇತನ ಪಾಲಿಗೆ ಸರ್ವೆ 32ರಲ್ಲಿ ಬಂದ ಜಮೀನಿನ ಪೈಕಿ 1 ಎಕರೆ 20 ಗುಂಠೆ ಜಮೀನನ್ನು ದಿಃ26.08.1980 ರಂದು ಬಿ.ಜಿ. ಶಿವರಾಜ್, ಸಯ್ಯದ್ ಸಾಬಜಾನ್, ಸಯ್ಯದ್ ಸುಭಾನ್ ಸಾಬ್ ಮತ್ತು ಸಯ್ಯದ್ ಅಮಾನುಲ್ಲಾ ಇವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸುಳ್ಳು. ಇದಕ್ಕೆ ಸಂಬಂಧಪಟ್ಟಂತೆ ದಿಃ28.08.1980 ರಂದು ಆದ ರಜಿಸ್ಟರ್ ಕ್ರಯಪತ್ರ ನಿಪಿ-1ನ್ನು ಈ ಪ್ರಕರಣದಲ್ಲಿ ಸಲ್ಲಿಸಲಾಗಿದೆ ಅಂದರೆ ಸುಳ್ಳು. ದಿಃ26.08.1980 ರಂದು ನನ್ನ ಗಂಡ ಜೀವಂತ ಇರಲಿಲ್ಲ ಅಂದರೆ ಸುಳ್ಳು. ಮೇಲ್ಕಂಡ ದಿನಾಂಕಿನದು ಆದ ಖರೀದಿ ಪತ್ರದಲ್ಲಿ ನನ್ನ ಗಂಡನನ್ನು ಪಾರ್ಟಿಯನ್ನಾಗಿ ತೋರಿಸಿಲ್ಲ

ಅಂದರೆ ಸುಳ್ಳು. ನಿಪಿ-1ರ ಪ್ರಕಾರ ನನ್ನ ಮಾವನಾದ ಬೀರಪ್ಪ, ಆತನ ಮಕ್ಕಳಾದ ಕೆಂಚಪ್ಪ ಮತ್ತು ಬಸವರಾಜಪ್ಪ ಇವರನ್ನು ಹೊರತು ಪಡಿಸಿ ಬೇರೆ ವ್ಯಕ್ತಿ ಯಾರು ಇಲ್ಲ ಅನ್ನುವುದು ಸುಳ್ಳು. ನನ್ನ ಮಾವನಾದ ಬೀರಪ್ಪ ಇತನಿಗೆ ಆತನ ಮೂರು ಗಂಡು ಮಕ್ಕಳಾದ ಕೆ.ಕೆಂಚಪ್ಪ ನನ್ನ ಗಂಡ ಕೆ.ಹನುಮಂತಪ್ಪ ಮತ್ತು ಮೈದುನನಾದ ಬಸವರಾಜಪ್ಪ ಈ ಮೂವರು ಗಂಡು ಮಕ್ಕಳನ್ನು ಹೊರತು ಪಡಿಸಿ ಇದೇ ಹೆಸರಿನ ಉಳಿದವರ್‍ಯಾರು ನನ್ನ ಮಾವನಿಗೆ ಇರುವುದಿಲ್ಲ. ನನ್ನ ಗಂಡನನ್ನು ಹೊರತು ಪಡಿಸಿ ಕೆ.ಕೆಂಚಪ್ಪ, ಕೆ.ಬಸವರಾಜಪ್ಪ ಮತ್ತು ನನ್ನ ಮಾವ ಬೀರಪ್ಪ ಇವರು ಮೇಲ್ಕಂಡ ವ್ಯಕ್ತಿಗಳಿಗೆ ದಿ:26.08.1980ರಲ್ಲಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸುಳ್ಳು.

15. ನಿಪಿ-1ರ ಪ್ರಕಾರ ನನ್ನ ಮಾವನಾದ ಬೀರಪ್ಪ ಇತನ ಪಾಲಿಗೆ ಬಂದ 4 ಎಕರೆ 3.5 ಗುಂತೆ ಜಮೀನಿನ ಪೈಕಿ 1 ಎಕೆರೆ 20 ಗುಂತೆ ಜಮೀನು ಇದರ ಪೂರ್ವಕ್ಕೆ ನಮ್ಮ ಬಾಬ್ತು ಉಳಿದ ಜಮೀನು, ಪಶ್ಚಿಮಕ್ಕೆ ಮೈಸೂರು ಕಿರ್ಲೋಸ್ಕರ ಕಂಪನಿ ಎಜುಕೇಷನ್ ಟ್ರಸ್ಟ್ ಪರವಾಗಿ ಪಳನಿಕರ್ ಇವರಿಗೆ ಸ್ವಾದೀನಗೊಂಡ ಕ್ರಯವಾದ ಜಮೀನು, ಉತ್ತರಕ್ಕೆ ಕರೇಗೋವಿಂದಪ್ಪರ ಬೀರಪ್ಪನ ಜಮೀನು ಮತ್ತು ದಕ್ಷಿಣಕ್ಕೆ ನಮ್ಮ ತಮ್ಮನ ಹಿಸ್ಸೆಗೆ ಬಂದ ನಾಗಪ್ಪನಿಂದ ಬಾಬಾಸಾಬ್ ವಗೈರೆ ಇವರಿಗೆ ಕ್ರಯವಾದ ಜಮೀನು, ಈ ಚಕ್ಕುಬಂದಿ ನಡುವಿನ ಜಮೀನನ್ನು ಮಾರಾಟ ಮಾಡಲಾಗಿದೆ ಅಂದರೆ ಸುಳ್ಳು. ಈ ಕುರಿತು ರಜಿಸ್ಟರ್ ಪತ್ರವನ್ನು ಪ್ರಕರಣದಲ್ಲಿ ಸಲ್ಲಿಸಿದ್ದು ಅದರ ಪ್ರತಿಯನ್ನು ನನಗೆ ಪೂರೈಸಲಾಗಿದೆ ಅಂದರೆ ಸುಳ್ಳು. ನಿಪಿ-1ರಲ್ಲಿ ಇರುವ ದಿನಾಂಕ:26.08.1980 ಇದನ್ನು ನೋಡಿಕೊಂಡು ನನ್ನ ಗಂಡ ದಿ:10.10.1980 ರಂದು ತೀರಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಸಮಯದಲ್ಲಿ ತಕರಾರುದಾರರ ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.